**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ,**
**ಹಿರೇಕೆರೂರ.**

**ಉಪಸ್ಥಿತರುಃ- ಶ್ರೀ ವೈ. ಕೆ. ಬೇನಾಳ,** ಬಿ.ಎ., ಎಲ್.ಎಲ್.ಬಿ., (ಆನರ್ಸ),
**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,**
**ಹಿರೇಕೆರೂರ.**

**ದಿನಾಂಕ 19 ನೇ ಫೆಬ್ರವರಿ 2024**

**ಕ್ರಿ.ಮಿೀ.ಸಂಖ್ಯೆಃ 75/2022**

**ಅರ್ಜಿದಾರರು:-**

ಶ್ರೀಮತಿ ಸವಿತಾ ಮತ್ತು ಇತರರು.

**ವಿರುದ್ಧ**

**ಎದುರುದಾರ:-**

ರಾಕೇಶ.

**ಮಧ್ಯಂತರ ಅರ್ಜಿ ಸಂಖ್ಯೆ-2**

**ಅರ್ಜಿದಾರರು:-**

1) ಶ್ರೀಮತಿ ಸವಿತಾ @ ತನುಶ್ರೀ ಕೋಂ ರಾಕೇಶ ಜೋಗೊಂಡ್ರ,
ವ: 30 ವರ್ಷ, ಉ: ಮನೆಕೆಲಸ,
ಸಾ:ಹಿರೇಕೆರೂರ, ತಾ: ಹಿರೇಕೆರೂರ, ಜಿ: ಹಾವೇರಿ.

2) ಸಂಚಿತ್ ತಂದೆ ರಾಕೇಶ ಜೋಗೊಂಡ್ರ,
ವ: 06 ವರ್ಷ, ಉ: ವಿದ್ಯಾರ್ಥಿ,
ಸಾ:ಹಿರೇಕೆರೂರ, ತಾ: ಹಿರೇಕೆರೂರ, ಜಿ: ಹಾವೇರಿ.

3) ಸಾಕ್ಷಿ ತಂದೆ ರಾಕೇಶ ಜೋಗೊಂಡ್ರ,
ವ: 04 ವರ್ಷ, ಉ: ವಿದ್ಯಾರ್ಥಿ,
ಸಾ:ಹಿರೇಕೆರೂರ, ತಾ: ಹಿರೇಕೆರೂರ, ಜಿ: ಹಾವೇರಿ.

**(ಅರ್ಜಿದಾರರ ಪರ ವಕೀಲರು ಶ್ರೀ ಕೆ.ಬಿ.ಬಾಳಿಕಾಯಿ)**

**ವಿರುದ್ಧ**

**ಎದುರುದಾರ:-**

ರಾಕೇಶ ತಂದೆ ಗದಿಗೆಪ್ಪ ಜೋಗೊಂಡ್ರ,
ವ: 38 ವರ್ಷ, ಉ: ಕೃಷಿ ಮತ್ತು ಸಹಕಾರಿ ಬ್ಯಾಂಕ್ ಉದ್ಯೋಗಿ,
ಸಾ:ಹಿರೇಕೆರೂರ, ತಾ: ಹಿರೇಕೆರೂರ, ಜಿ: ಹಾವೇರಿ.

**(ಎದುರುದಾರನ ಪರ ವಕೀಲರು - ಶ್ರೀವಿ.ವಿ. ಮುಚುಡಿ)**

-:oOo:-

## ಮಧ್ಯಂತರ ಅರ್ಜಿ ಸಂಃ 2 ರ ಮೇಲೆ ಆದೇಶ

ಅರ್ಜಿದಾರರು ಈ ಅರ್ಜಿಯನ್ನು ದಂಡ ಪ್ರಕ್ರಿಯಾ ಸಂಹಿತೆಯ ಕಲಂ 125(2) ರ ಅಡಿಯಲ್ಲಿ ಸಲ್ಲಿಸಿ, ಎದುರುದಾರನಿಂದ 1 ನೇ ಅರ್ಜಿದಾರಳಿಗೆ ಮಾಸಿಕ 10,000/- ರೂ. 2 ಮತ್ತು 3 ನೇ ಅರ್ಜಿದಾರರಿಗೆ ತಲಾ 8,000/- ರೂ.ಗಳ ಮಧ್ಯಂತರ ಜೀವನಾಂಶವನ್ನು ಕೊಡಿಸಬೇಕೆಂದು ಕೋರಿರುತ್ತಾರೆ.

2. ಈ ಮಧ್ಯಂತರ ಅರ್ಜಿಯೊಂದಿಗೆ 1 ನೇ ಅರ್ಜಿದಾರಳು ತನ್ನ ಪ್ರಮಾಣಪತ್ರವನ್ನು ಸಲ್ಲಿಸಿ, ಅದರಲ್ಲಿ ವಿವರವಾದ ಕಾರಣಗಳನ್ನು ಹೇಳಿ, ಸದರಿ ಕಾರಣಗಳ ಮೇಲೆ, ಈ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಬೇಕು ಎಂದು ಪ್ರಾರ್ಥಿಸಿಕೊಂಡಿರುತ್ತಾರೆ.

3. ಎದುರುದಾರನಿಗೆ ಅರ್ಜಿಯ ನೋಟೀಸನ್ನು ಕಳುಹಿಸಲಾಗಿ, ಎದುರುದಾರನು ತನ್ನ ವಕೀಲರ ಮೂಲಕ ಹಾಜರಾಗಿ ಮುಖ್ಯ ಅರ್ಜಿಗೆ ತಕರಾರನ್ನು ಸಲ್ಲಿಸಿರುತ್ತಾನೆ.

4. ಅರ್ಜಿದಾರರ ಮತ್ತು ಎದುರುದಾರನ ಪರ ವಕೀಲರ ವಾದವನ್ನು ಆಲಿಸಲಾಯಿತು.

5. ನನ್ನ ಪರಿಗಣನೆಗೆ ಈ ಕೆಳಕಂಡ ಅಂಶಗಳು ಉದ್ಭವಿಸಿರುತ್ತವೆ.

ಅಂಶ-1: - ಈ ಮಧ್ಯಂತರ ಅರ್ಜಿಯಲ್ಲಿ ಕೋರಿರುವಂತೆ ಮಧ್ಯಂತರ ಜೀವನಾಂಶವನ್ನು ಪಡೆಯಲು ಅರ್ಹರಾಗಿರುತ್ತಾರೆ ಎನ್ನುವುದನ್ನು ಅರ್ಜಿದಾರರು ತೋರಿಸಿದ್ದಾರೆಯೇ

ಅಂಶ-2: - ಯಾವ ಆದೇಶ?

6. ಮೇಲಿನ ಅಂಶಗಳಿಗೆ ಈ ಕೆಳಕಂಡ ಕಾರಣಗಳಿಗಾಗಿ ಈ ಕೆಳಕಂಡಂತೆ ಉತ್ತರಿಸುತ್ತಿದ್ದೇನೆ:

ಅಂಶ-1 - ಭಾಗಶಃ ಸಕಾರಾತ್ಮಕವಾಗಿ ಮತ್ತು

ಅಂಶ-2 - ಅಂತಿಮ ಆದೇಶದಂತೆ:

## **ಕಾರಣಗಳು**

7. **ಅಂಶ-1:-** 1ನೇ ಅರ್ಜಿದಾರಳು ಎದುರುದಾರನ ಹೆಂಡತಿ

ಎನ್ನುವುದು ನಿರ್ವಿವಾದವಾದ ಸಂಗತಿ. 1ನೇ ಅರ್ಜಿದಾರಳ ಹಾಗೂ ಎದುರುದಾರನ ವೈವಾಹಿಕ ಜೀವನದಿಂದ 2 ಮತ್ತು 3ನೇ ಅರ್ಜಿದಾರರು ಜನಿಸಿರುತ್ತಾರೆ ಎನ್ನುವುದು ನಿರ್ವಿವಾದವಾದ ಸಂಗತಿ. ಅಲ್ಲದೇ, ಈಗ ಅರ್ಜಿದಾರರ ಜೀವನ ನಿರ್ವಹಣೆಯನ್ನು ಎದುರುದಾರನು ನೋಡಿಕೊಳ್ಳುತ್ತಿಲ್ಲ ಹಾಗೂ ಅರ್ಜಿದಾರರು ಮತ್ತು ಎದುರುದಾರನು ಬೇರೆ-ಬೇರೆ ವಾಸ ಇರುತ್ತಾರೆ ಎನ್ನುವುದು ನಿರ್ವಿವಾದವಾದ ಸಂಗತಿ.

8. 1ನೇ ಅರ್ಜಿದಾರಳು ಈ ಮಧ್ಯಂತರ ಅರ್ಜಿಯೊಂದಿಗೆ ಸಲ್ಲಿಸಿರುವ ತನ್ನ ಪ್ರಮಾಣ ಪತ್ರದಲ್ಲಿ, 1ನೇ ಅರ್ಜಿದಾರಳ ಹಾಗೂ ಎದುರುದಾರನ ವಿವಾಹವು ದಿ: 19-04-2016 ರಂದು ಜರುಗಿದ್ದು, 2 ರಿಂದ 3 ವರ್ಷ ಸುರಳಿತ ಜೀವನ ಸಾಗಿಸಿದ್ದು, ತಮ್ಮ ದಾಂಪತ್ಯದಿಂದ ಸಂಚಿತ್ ಹಾಗೂ ಸಾಕ್ಷಿ ಎನ್ನುವ ಮಕ್ಕಳು ಜನಿಸಿದ್ದು, ನಂತರ ಎದುರುದಾರನು ವಿನಾಕಾರಣ ಕುಡಿತ ಹಾಗೂ ಜೂಜಾಟದ ಚಟಗಳಿಗೆ ಬಲಿಯಾಗಿ ಎದುರುದಾರನು ಅರ್ಜಿದಾರರನ್ನು ನಿರ್ಲಕ್ಷಿಸುತ್ತಾ ಬಂದಿದ್ದು, 1ನೇ ಅರ್ಜಿದಾರಳಿಗೆ ವಿನಾಕಾರಣ ಹೊಡೆಯುವುದು ಬೈಯುವುದು ಮಾಡುತ್ತ ಬಂದಿದ್ದು, ದೈಹಿಕವಾಗಿ ಹಾಗೂ ಮಾನಸಿಕವಾಗಿ ಕಿರುಕುಳ ನೀಡುತ್ತಾ ಬಂದಿರುತ್ತಾನೆ. 1ನೇ ಅರ್ಜಿದಾರಳು ತನಗೆ ಕೊಡುವ ಹಿಂಸೆಯನ್ನು ತಾಳಲಾರದೆ ತನ್ನ ಸಂಬಂಧಿಕರ ಹಾಗೂ ಬಂಧು ಬಳಗದವರ ಹತ್ತಿರ ವಿಷಯ ತಿಳಿಸಿದ್ದು, ಅವರು ಹಾಗೂ 1ನೇ ಅರ್ಜಿದಾರಳ ತಾಯಿ ಎದುರುದಾರನಿಗೆ ಎಷ್ಟೇ ಬುದ್ಧಿ ಮಾತು ಹೇಳಿಸಿದರು ಎದುರುದಾರನು ಅರ್ಜಿದಾರರನ್ನು ನಿರ್ಲಕ್ಷಿಸುತ್ತಾ ಬಂದು 1ನೇ ಅರ್ಜಿದಾರಳಿಗೆ ಮಾರಣಾಂತಿಕವಾದ ಹಲ್ಲೆಯನ್ನು ಮಾಡಿದ್ದು ಸಹ ಇರುತ್ತದೆ. ಎದುರುದಾರನ ಹಿಂಸೆಯನ್ನು ಸಹಿಸಿಕೊಳ್ಳಲಾರದೆ ಇದಕ್ಕೆ ಸಂಬಂಧಿಸಿದಂತೆ

1ನೇ ಅರ್ಜಿದಾರಳು ಹಿರೇಕೆರೂರ ಪೋಲಿಸ್ ಠಾಣೆಯಲ್ಲಿ ಪಿರ್ಯಾದಿಯನ್ನು ಸಲ್ಲಿಸಿದ್ದು, ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ, ಎದುರುದಾರನು ಜಿಲ್ಲಾ ನ್ಯಾಯಾಲಯಕ್ಕೆ ನಿರೀಕ್ಷಣಾ ಜಾಮೀನು ಸಹ ಪಡೆದಿರುತ್ತಾನೆ. ಎದುರುದಾರನು ಅರ್ಜಿದಾರರನ್ನು ಮನೆಯಿಂದ ಹೊರಹಾಕಿದ್ದು, 1ನೇ ಅರ್ಜಿದಾರಳು ತನ್ನ ಅಲ್ಪವಯಿ ಮಕ್ಕಳನ್ನು ಕರೆದುಕೊಂಡು ತನ್ನ ತವರು ಮನೆಯಾದ ಹಾವೇರಿ ಜಿಲ್ಲಾ ರಾಣೆಬೆನ್ನೂರ ತಾಲೂಕಿನ ಹೆಡಿಯಾಲ ಗ್ರಾಮಕ್ಕೆ ಹೋಗಿರುತ್ತಾಳೆ. ಆದರೂ ಸಹ ಎದುರುದಾರನು ಅರ್ಜಿದಾರರನ್ನು ಕರೆದುಕೊಂಡು ಹೋಗುವ ಯಾವುದೇ ಪ್ರಯತ್ನವನ್ನು ಮಾಡಿರುವುದಿಲ್ಲ. ಇದರಿಂದ 1ನೇ ಅರ್ಜಿದಾರಳು ಹಾಗೂ ಅಲ್ಪವಯಿ ಅರ್ಜಿದಾರರನ್ನು ಪೋಷಿಸುವ ಜವಾಬ್ದಾರಿಯನ್ನು 1ನೇ ಅರ್ಜಿದಾರಳೇ ನಿರ್ವಹಿಸುತ್ತಿದ್ದು, ಸದರಿ ನಿರ್ವಹಣೆಯು 1ನೇ ಅರ್ಜಿದಾರಳಿಗೆ ಕಷ್ಟಕರವಾಗಿದ್ದರಿಂದ, 1ನೇ ಅರ್ಜಿದಾರಳು ಎದುರುದಾರನಿಗೆ ಜೀವನ ನಿರ್ವಹಣೆಯ ವ್ಯವಸ್ಥೆ ಮಾಡುವಂತೆ ಕೇಳಿಕೊಂಡರು ಸಹ ಎದುರುದಾರನು ಯಾವುದೇ ರೀತಿಯ ಜೀವನ ನಿರ್ವಹಣೆ ವ್ಯವಸ್ಥೆ ಮಾಡಿರುವುದಿಲ್ಲ. 1ನೇ ಅರ್ಜಿದಾರಳ ತವರು ಮನೆಯವರು ಅಷ್ಟೇನು ಉತ್ತಮ ಸ್ಥಿತಿಯಲ್ಲಿ ಇಲ್ಲದ್ದರಿಂದ, ಎದುರುದಾರನು ಅರ್ಜಿದಾರರ ಪಾಲನೆ, ಪೋಷಣೆ ಹಾಗೂ ಅಲ್ಪವಯಿ ಮಕ್ಕಳ ಶಿಕ್ಷಣದ ನಿರ್ವಹಣೆ ಮಾಡುವ ಜವಾಬ್ದಾರಿಯನ್ನು ಹೊಂದಿರುತ್ತಾನೆ. ಎದುರುದಾರನು ಹಿರೇಕೆರೂರ ಪಟ್ಟಣದಲ್ಲಿ ಸರ್ವೆ ನಂ. 232/3ಎ/2 ಪ್ಲಾಟ್ ನಂ. 1 ರಲ್ಲಿ 1 ಗುಂಟೆ 12 ಆಣೆ 27 ಫೂಟ್ ವಿಸ್ತೀರ್ಣದ ಸೈಟನ್ನು ಹೊಂದಿದ್ದು, ಹಾಗೂ ಹಿರೇಕೆರೂರ ತಾಲೂಕ ಮಡ್ಲೂರ ಗ್ರಾಮದ ವ್ಯಾಪ್ತಿಯಲ್ಲಿ ಇರುವ ಜಮೀನ ರಿ.ಸ.ನಂ. 250/2, 149/1, 149/2 ಹಾಗೂ 150/1+2+3ಅ ಅಂತಾ ಜಮೀನುಗಳು ಇದ್ದು,

ಎದುರುದಾರನು ಸ್ವಂತ ಹಣಕಾಸು ಸಂಸ್ಥೆಯನ್ನು ಹೊಂದಿದ್ದು, ಅದರಿಂದ ಪ್ರತಿ ತಿಂಗಳು 80 ರಿಂದ 1,00,000/- ಗಳವರೆಗೆ ಆದಾಯ ಹೊಂದಿರುತ್ತಾನೆ. ಇದುವರೆಗೂ ಅರ್ಜಿದಾರರ ಜೀವನಕ್ಕೆ ಯಾವುದೇ ರೀತಿಯ ವ್ಯವಸ್ಥೆ ಮಾಡಿರುವುದಿಲ್ಲ ಎಂದು ಆರೋಪಿಸಿರುತ್ತಾಳೆ. ಆದರೆ, ಎದುರುದಾರನು ತನ್ನ ತಕರಾರಿನಲ್ಲಿ, 1ನೇ ಅರ್ಜಿದಾರಳ ಹಾಗೂ ಎದುರುದಾರನ ಸಂಬಂಧಿಕರು ಸಾಕಷ್ಟು ಸಾರಿ ಪಂಚಾಯತಿ ಮಾಡಿ ರಾಜಿ ಮಾಡಲು ಯತ್ನಿಸಿದರೂ ಸಹ ಅರ್ಜಿದಾರಳು ಯಾರ ಮಾತಿಗೂ ಬೆಲೆ ಕೊಡದೇ ಅವಳ ಸಹೋದರಿಯರು ಹಾಗೂ ಅವಳ ಸೋದರ ಮಾವಂದಿರು ಹಾಗೂ ಅವಳ ತಾಯಿ ಎದುರುದಾರನಿಗೆ ಪ್ರತ್ಯೇಕ ಮನೆ ಮಾಡುವಂತೆ ಒತ್ತಾಯಿಸಿದ್ದು, ಆ ಕಾರಣ ಎದುರುದಾರನು ಪ್ರತ್ಯೇಕ ಮನೆ ಮಾಡಿದ ನಂತರ 1ನೇ ಅರ್ಜಿದಾರಳು ಅವರ ತವರು ಮನೆಯವರ ಚಾಡಿ ಮಾತಿಗೆ ಬಲಿಯಾಗಿ ಎದುರುದಾರನೊಂದಿಗೆ ವಿನಾಃಕಾರಣ ಜಗಳ ಆಡುವುದು ಎದುರುದಾರನ ಸಹೋದರಿಯರಿಗೆ, ತಂದೆ-ತಾಯಿಗೆ ಅವಾಚ್ಯ ಶಬ್ದಗಳಿಂದ ಬೈಯುವುದು ಹಾಗೂ ಈ ಬಗ್ಗೆ ಬುದ್ದಿ ಮಾತು ಹೇಳಲು ಹೋದರೆ ಅವನ ತಂದೆ-ತಾಯಿ ಹಾಗೂ ಅಕ್ಕ-ತಂಗಿಯರನ್ನು ಜೀವಂತ ಬಿಡುವುದಿಲ್ಲ ಎಂದು ಜೀವದ ಧಮಕಿ ಹಾಕುತ್ತಿದ್ದು, ಎದುರುದಾರನು ಸಹಕಾರಿ ಸೋಸೈಟಿಯಲ್ಲಿ ಕೆಲಸ ಮಾಡುತ್ತಿದ್ದಾಗ ಸಾಲಗಾರರಿಂದ ಸಾಲದ ಹಣ ವಸೂಲಿ ಮಾಡಿಕೊಂಡು ತಂದ ಹಣವನ್ನು ಅರ್ಜಿದಾರಳು ಕಳವು ಮಾಡುತ್ತಿದ್ದು, 1ನೇ ಅರ್ಜಿದಾರಳ ಹಾಗೂ ಎದುರುದಾರನ ವಿವಾಹ ಪೂರ್ವದಲ್ಲಿ ಅವಳ ತವರು ಮನೆಯವರು ಪ್ಯಾರಾ ಮೆಡಿಕಲ್ ಕೋರ್ಸ ಮುಗಿದಿದೆ ಎಂದು ಸುಳ್ಳು ಹೇಳಿ ವಿವಾಹ ಮಾಡಿದ್ದು, ವಿವಾಹದ ನಂತರ ಮಾನವೀಯ ಮೌಲ್ಯಗಳ ಆಧಾರದ

ಮೇಲೆ ಎದುರುದಾರನು 1ನೇ ಅರ್ಜಿದಾರಳ ಪ್ಯಾರಾ ಮೆಡಿಕಲ್ ಕೋರ್ಸ ಪೂರ್ಣಗೊಳಿಸಲು ತನ್ನ ಬಳಿ ಇದ್ದ ಸುಮಾರು 3 ಲಕ್ಷ ರೂ.ಗಳನ್ನು ಖರ್ಚು ಮಾಡಿ ಕೋರ್ಸ ಕಂಪ್ಲೀಟ್ ಮಾಡಿಸಿದ್ದು, ಮುಂದೆ ಹಿರೇಕೆರೂರಿನ ಮಾಗನೂರ ಹೆಲ್ತ ಕೇರ್ ಸೆಂಟರ್ ಅವರಲ್ಲಿ ನೌಕರಿ ಕೊಡಿಸಿದ್ದು, ಹೀಗೆ ಸದರಿ ಕೆಲಸದಿಂದ ವೇತನ ಪಡೆಯಲಾರಂಭಿಸಿದ ಮೇಲೆ 1ನೇ ಅರ್ಜಿದಾರಳ ಉಪಟಳ ದ್ವಿಗುಣಗೊಂಡಿದ್ದು, ಎದುರುದಾರನು ತಾನಾಗಲೀ, ತನ್ನ ಮಕ್ಕಳೊಂದಿಗಾಗಲಿ ತನ್ನ ಅಕ್ಕ-ತಂಗಿಯರ ಮನೆಗೆ ಹೋದರೆ ಅವರೊಂದಿಗೆ ಅನೈತಿಕ ಸಂಬಂಧ ಕಲ್ಪಿಸಿಕೊಂಡು ಆರೋಪಿಸಿ ಜಗಳ ಆಡುತ್ತಿದ್ದು, ಎದುರುದಾರನ ತಂದೆ-ತಾಯಿಯು ಅಲ್ಪವಯಿ ಅರ್ಜಿದಾರರನ್ನು ನೋಡಲು ಎದುರುದಾರನ ಮಾಡಿದ ಬಾಡಿಗೆ ಮನೆಗೆ ಬಂದರೆ ಅವರಿಗೂ ಸಹ ಅವಾಚ್ಯ ಶಬ್ದಗಳಿಂದ ಬೈದು ಸಾರ್ವಜನಿಕವಾಗಿ ಏರುಧ್ವನಿಯಲ್ಲಿ ಜಗಳ ಮಾಡಿ ಮರ್ಯಾದೆ ಹೋಗುವಂತೆ ಮಾಡುತ್ತಿದ್ದು, ಎದುರುದಾರನು ತನ್ನ ಮಕ್ಕಳನ್ನು ಸೆಂಟ್ ಮೇರಿಸ್ ಶಾಲೆಗೆ ದಾಖಲಿಸಿದ್ದು, ನಂತರ ಅರ್ಜಿದಾರಳು ಪ್ರತಿ ದಿವಸ ತನ್ನ ತಾಯಿ ಸಹೋದರಿಯರು ಹಾಗೂ ಸೋದರ ಮಾವಂದಿರ ಮಾತು ಕೇಳಿ ಜಗಳ ಮಾಡಿ ಒಂದು ಸುಳ್ಳು ಪಿರ್ಯಾದಿಯನ್ನು ಎದುರುದಾರ ಹಾಗೂ ಅವನ ತಂದೆ-ತಾಯಿಯ ಮೇಲೆ ದಾಖಲಿಸಿ ಮಕ್ಕಳನ್ನು ಶಾಲೆ ಬಿಡಿಸಿ ಎದುರುದಾರನು ಮನೆಯಲ್ಲಿ ಇಲ್ಲದಾಗ್ಗೆ ಬಟ್ಟೆ, ಬಂಗಾರ ಸುಮಾರು 50,000/- ಸಾಲ ಕಂತಿನ ಹಣ ತೆಗೆದುಕೊಂಡು ತವರು ಮನೆಗೆ ಹೋಗಿದ್ದು ಎದುರುದಾರನ ಮಕ್ಕಳನ್ನು ಸಿ.ಇ.ಎಸ್. ಶಾಲೆಗೆ ದಾಖಲಿಸಿದ್ದಾಳೆ. ಎದುರುದಾರನು 1ನೇ ಅರ್ಜಿದಾರಳು ಮನಃಪೂರ್ವಕವಾಗಿ ಬಂದರೆ ಅವಳೊಂದಿಗೆ ವೈವಾಹಿಕ ಜೀವನ ನಡೆಸಲು

ತಯಾರಿದ್ದು, ಅರ್ಜಿದಾರಳು ತಾನೇ ಸ್ವ ಇಚ್ಛೇಯಿಂದ ಎದುರುದಾರನನ್ನು ಬಿಟ್ಟು ಹೋಗಿರುತ್ತಾಳೆ ಎಂದು ತನ್ನ ಪ್ರತಿರಕ್ಷೆಯನ್ನು ತೆಗೆದುಕೊಂಡಿರುತ್ತಾನೆ.

9. ಎದುರುದಾರನು 1ನೇ ಅರ್ಜಿದಾರಳ ಕಾನೂನು ಬದ್ಧ ಮದುವೆಯಾದ ಗಂಡನಿರುವುದರಿಂದ ಮತ್ತು 2 ಮತ್ತು 3ನೇ ಅರ್ಜಿದಾರರು ಎದುರುದಾರನ ಮಕ್ಕಳ ಇರುವುದರಿಂದ, ಅರ್ಜಿದಾರರ ಜೀವನ ನಿರ್ವಹಣೆಯನ್ನು ನೋಡಿಕೊಳ್ಳುವುದು ಆದ್ಯ ಕರ್ತವ್ಯ ಎದುರುದಾರನದೇ ಆಗಿರುತ್ತದೆ.

10. ಎದುರುದಾರನು ಹಾಜರುಪಡಿಸಿರುವ ದಾಖಲೆಯನ್ನು ಅವಲೋಕಿಸಲಾಗಿ, 1ನೇ ಅರ್ಜಿದಾರಳು ಹಿರೇಕೆರೂರಿನ ಮಾಗನೂರ ಹೆಲ್ತ ಕೇರ್‌ಲ್ಲಿ ಕೆಲಸ ನಿರ್ವಹಿಸುತ್ತಿದ್ದಾಳೆಂದು ಮೇಲ್ನೋಟಕ್ಕೆ ಕಂಡುಬರುತ್ತಿರುವುದರಿಂದ, ಅವಳು ದುಡಿಯುವಂತಹ ಸಾಮರ್ಥ್ಯವನ್ನು ಹೊಂದಿರುತ್ತಾಳೆಂದು ಕಂಡು ಬರುತ್ತದೆ. ಆದರೆ, ಅವಳು ಸದರಿ ಕೆಲಸದಲ್ಲಿ ಮುಂದುವರೆದಿರುತ್ತಾಳೆ ಅಥವಾ ಬಿಟ್ಟಿರುತ್ತಾಳೆ ಎನ್ನುವುದು ಸಂಪೂರ್ಣ ಸಾಕ್ಷಿ ವಿಚಾರಣೆಯಾದ ನಂತರ ಗೊತ್ತಾಗುತ್ತದೆ. ಆದರೆ, ಅವಳು ಇನ್ನು ವಯಸ್ಕಳೇದ್ದು, ಮೇಲ್ನೋಟಕ್ಕೆ ಕೆಲಸವನ್ನು ಮಾಡಿಕೊಂಡಿದ್ದು, ತನ್ನ ಜೀವನ ನಿರ್ವಹಣೆಗೆ ಸಂಪಾದನೆಯನ್ನು ಹೊಂದಿರುತ್ತಾಳೆಂದು ಕಂಡು ಬರುತ್ತದೆ. ಆದರೆ, 2 ಮತ್ತು 3ನೇ ಅರ್ಜಿದಾರರು ಅಲ್ಪವಯಿಗಳಿದ್ದು, ಅವರ ಜೀವನ ನಿರ್ವಹಣೆಯನ್ನು 1ನೇ ಅರ್ಜಿದಾರಳೇ ನೋಡಿಕೊಳ್ಳುತ್ತಿದ್ದು, ಈಗಿನ ಎಲ್ಲ ಅವಶ್ಯಕ ವಸ್ತುಗಳ ಬೆಲೆ ಹೆಚ್ಚಾಗಿರುವುದರಿಂದ 1ನೇ ಅರ್ಜಿದಾರಳ ದುಡಿಮೆಯ ಹಣದಿಂದ ಅಲ್ಪವಯಿ ಅರ್ಜಿದಾರರ ಜೀವನ ನಿರ್ವಹಣೆಗೆ ಕಷ್ಟವಾಗುತ್ತದೆ. ಆದ್ದರಿಂದ, 2 ಮತ್ತು 3ನೇ ಅರ್ಜಿದಾರರ ಜೀವನ

ನಿರ್ವಹಣೆಗಾಗಿ ಎದುರುದಾರನಿಂದ ತಿಂಗಳಿಗೆ ತಲಾ ರೂ. 4,000/- ಜೀವನಾಂಶದ ಅವಶ್ಯಕತೆ ಇರುತ್ತದೆ ಮತ್ತು ಎದುರುದಾರನು ಸಹ ಇನ್ನು 38 ವರ್ಷ ವಯಸ್ಕನಿದ್ದು, ಅವನು ದುಡಿಯುವಂತಹ ದೈಹಿಕ ಸಾಮರ್ಥ್ಯವನ್ನು ಹೊಂದಿರುತ್ತಾನೆ. ಕಾರಣ, ಎದುರುದಾರನು 2 ಮತ್ತು 3ನೇ ಅರ್ಜಿದಾರರಿಗೆ ಮಧ್ಯಂತರ ಜೀವನಾಂಶವಾಗಿ ತಿಂಗಳಿಗೆ ತಲಾ ರೂ. 4,000/- ಗಳನ್ನು ಕೊಡುವಂತಹ ಎಲ್ಲ ಸಾಮರ್ಥ್ಯವನ್ನು ಹೊಂದಿರುತ್ತಾನೆ. ಆದ್ದರಿಂದ, ಮಧ್ಯಕಾಲೀನ ಜೀವನಾಂಶವಾಗಿ 2 ಮತ್ತು 3ನೇ ಅರ್ಜಿದಾರರು ಅರ್ಜಿಯನ್ನು ಸಲ್ಲಿಸಿದ ದಿನಾಂಕದಿಂದ ಎದುರುದಾರನಿಂದ ತಿಂಗಳಿಗೆ ತಲಾ ರೂ. 4,000/- ಗಳನ್ನು ಪಡೆಯಲು ಅರ್ಹರಾಗಿರುತ್ತಾರೆ ಎಂದು ತೀರ್ಮಾನಿಸಿ ಅಂಶ-1ನ್ನು ಭಾಗಶಃ ಸಕಾರಾತ್ಮಕವಾಗಿ ಉತ್ತರಿಸಿದ್ದೇನೆ.

11. **ಅಂಶ-2:–** ಮೇಲಿನ ಅಂಶದಲ್ಲಿ ಚರ್ಚಿಸಲಾದ ಕಾರಣಗಳಿಂದಾಗಿ ಈ ಕೆಳಕಂಡಂತೆ ಮಾಡಿದಃ

## ಆದೇಶ

ಅರ್ಜಿದಾರರು ದಂಡ ಪ್ರಕ್ರಿಯಾ ಸಂಹಿತೆ ಕಲಂ 125(2) ರ ಅಡಿಯಲ್ಲಿ ಎದುರುದಾರನ ವಿರುದ್ಧ ಸಲ್ಲಿಸಿದ ಮಧ್ಯಂತರ ಅರ್ಜಿ ಸಂಃ2ನ್ನು ಭಾಗಶಃ ಖರ್ಚು ಸಹಿತ ಪುರಸ್ಕರಿಸಲಾಗಿದೆ.

2 ಮತ್ತು 3ನೇ ಅರ್ಜಿದಾರರು ತಿಂಗಳಿಗೆ ತಲಾ 4,000/- ರೂ.ಗಳ ಮಧ್ಯಕಾಲಿನ ಜೀವನಾಂಶವನ್ನು, ಅರ್ಜಿಯನ್ನು

ಸಲ್ಲಿಸಿದ ದಿನಾಂಕದಿಂದ ಮುಖ್ಯ ಅರ್ಜಿ ಇತ್ಯರ್ಥವಾಗುವವರೆಗೆ ಎದುರುದಾರನಿಂದ ಪಡೆಯಲು ಅರ್ಹರು ಎಂದು ಆದೇಶಿಸಿದೆ.

**(ನನ್ನ ಉಕ್ತಲೇಖನದ ಪ್ರಕಾರ ಶೀಘ್ರಲಿಪಿಗಾರರಿಂದ ನೇರವಾಗಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ ಅದರಲ್ಲಿದ್ದ ಲೋಪದೋಷಗಳನ್ನು ತಿದ್ದಿ ಇಂದು ದಿನಾಂಕ 19ನೇ ಫೆಬ್ರವರಿ 2024 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು)**

sd/-
**(ವೈ. ಕೆ. ಬೇನಾಳ)**
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಹಿರೇಕೆರೂರ.